**ಓಎಸ್ ನಂಃ 31/2013 ಪಿಡಬ್ಲ್ಯೂ- 2**

**ದಿನಾಂಕಃ 25.04.2026 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿಯ ಪರ ಶ್ರೀ ಜಿ.ಎಂ.ಐ. ವಕೀಲರಿಂದಃ**

**ನಾನು ಈ ದಾವೆಯಲ್ಲಿ ವಾದಿಯ ಪರ ಸಾಕ್ಷಿಯಾಗಿದ್ದು ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಶಪಥ ಪತ್ರವನ್ನು ಹಾಜರುಪಡಿಸಿದ್ದೇನೆ. ಅದನ್ನು ನನ್ನ ಹೇಳಿಕೆಯ ಮೇರೆಗೆ ತಯಾರಿಸಿದ್ದಾರೆ. ಸದರಿ ಪ್ರಮಾಣ ಪತ್ರದಲ್ಲಿ ಬರೆದಿರುವ ಎಲ್ಲಾ ಸಂಗತಿಗಳು ಸತ್ಯವಾಗಿದೆ, ಇದರಲ್ಲಿ ಇರುವ ಸಹಿ ನನ್ನದು.**

**ಪಾಟೀಸವಾಲುಃ ಪ್ರತಿವಾದಿಯ ಪರ ಶ್ರೀ ಟಿ.ಎನ್.ಎಸ್. ವಕೀಲರಿಂದಃ**

ದಾವಾ ಆಸ್ತಿ ಸ.ನಂ. ಎಷ್ಟು ಎಂದರೆ 24/4. ಒಟ್ಟು ವಿಸ್ತೀರ್ಣ ಎಷ್ಟು ಎಂದರೆ 1 ಎಕರೆ 1 ಗುಂಟೆ. ಅದರಲ್ಲಿ ದಾವಾ ಮತ್ತು ಪ್ರತಿವಾದಿಯದ್ದು ಎಷ್ಟು ಇರುತ್ತದೆ ಎಂದರೆ ವಾದಿಯದ್ದು 14 ಗುಂಟೆ ಪ್ರತಿವಾದಿಯದ್ದು 28 ಗುಂಟೆ ಎನ್ನುತ್ತಾರೆ. ಕ್ರಯದ ಕರಾರು ಪತ್ರ ನೀವು ಇದ್ದಿರಾ ಎಂದರೆ ಇದ್ದೆ ಅದಕ್ಕೆ ಸಹಿ ಮಾಡಿರುತ್ತೀರಾ ಎಂದರೆ ಇಲ್ಲ. ಸದರಿ ಕರಾರು ಪತ್ರ ಯಾರು ತಂದಿರುತ್ತಾರೆ ಎಂದರೆ ವಾದಿ ತಂದಿರುತ್ತಾರೆ. ಅದನ್ನು ಯಾರು ಬರೆದಿರುತ್ತಾರೆ ಎಂದರೆ ರಂಗಭಟ್ಟಚಾರ್ಯ ಬರೆದಿರುತ್ತಾರೆ ಕೈಯಲ್ಲಿ ಬರೆದಿರುತ್ತಾರೆ ಎಂದರೆ ಹೌದು. ಎಲ್ಲಿ ಬರೆದಿರತ್ತಾರೆ ಎಂದರೆ ತಾಲೂಕು ಕಚೇರಿ ಹತ್ತಿರ ಎನ್ನುತ್ತಾರೆ. ಎಷ್ಟು ದಿನ ಟೈಂ ಫಿಕ್ಸ್ ಮಾಡಿರುತ್ತಾರೆ ಎಂದರೆ ಸಾಕ್ಷಿ ಟೈಂ ಫಿಕ್ಸ್ ಇಲ್ಲ ತುಂಡು ಭೂಮಿ ನಿಷೇದ ಕಾಯ್ದೆ ಇದ್ದಿದ್ದರಿಂದ ಕರಾರು ಆಗಿರುವುದಿಲ್ಲ. ತುಂಡು ಭೂಮಿ ನಿಷೇದ ಕಾಯ್ದೆ ಸರ್ಕಾರದವರು ಯಾವಾಗ ಮಾಡಿರುತ್ತಾರೆ ಎಂದು ಗೊತ್ತಾ ಎಂದರೆ ಗೊತ್ತಿಲ್ಲ. ವಾದಿ ಕರಾರು ಮೇಲೆ ನೊಂದಣಿ ಮಾಡಿ ಕೊಡಬೇಕೆಂದು ದಾವೆ ಹೂಡಿರುತ್ತಾರಾ ಎಂದರೆ ಹಾಕಿರುತ್ತಾರೆ. ಪ್ರಸುತ್ತ ದಾವೆಯೋ ಬೇರೇ ದಾವೆ ಹಾಕಿರುತ್ತಾರೋ ಎಂದರೆ ಪ್ರಸುತ್ತ ದಾವೆ

ಎನ್ನುತ್ತಾರೆ. ಪ್ರಸುತ್ತ ದಾವೆ ಕರಾರು ಪತ್ರ ವಿಚಾರವಾಗಿ ಕ್ರಯ ಪತ್ರ ನೋಂದಣಿ ಮಾಡಿಸಿ ಕೊಡಬೇಕೆಂದು ಹಾಕಿರುತ್ತಾರಾ ಎಂದರೆ ಹೌದು. ದುರಸ್ತು ಆಗಿ ಸ.ನಂ. ಬೇರೆ ಬೇರೇ ಆಗಿರುವುದು ಗೊತ್ತಾ ಎಂದರೆ ಗೊತ್ತಿಲ್ಲ. ಖಾತೆ ಪಹಣಿ ಯಾರ ಹೆಸರಿಗೆ ಬಂದಿರುತ್ತದೆ ಎಂದು ಗೊತ್ತಾ ಎಂದರೆ ಮೊದಲು ನಾರಾಯಣಸ್ವಾಮಿ ತಂದೆ ವೆಂಕಟಪ್ಪ ಹೆಸರಿನಲ್ಲಿ ಇತ್ತು ನಂತರ ಶಾಮಣ್ಣ ರವರು ಮಾಡಿಸಿಕೊಂಡಿರುತ್ತಾರೆ. ಸದರಿ ಶಾಮಣ್ಣ ತೀರಿಕೊಂಡ ನಂತರ ಯಾರ ಹೆಸರಿಗೆ ಬಂದಿರುತ್ತದೆ ಎಂದರೆ ಗೊತ್ತಿಲ್ಲ. ಈ ಮೊದಲು ಮತ್ತೊಂದು ದಾವೆ ಅದನ್ನು ವಾದಿ ಹೇಳಿರುತ್ತಾರಾ ಎಂದರೆ ಹೇಳಿರುತ್ತಾರೆ. ಈ ಮೊದಲ ದಾವೆ ಏನಾಗಿರುತ್ತದೆ ಎಂದರ ಸಾಕ್ಷಿ ಮೊದಲ ದಾವೆ ಚೆನ್ನಾಗಿ ನಡೆಸಿಲ್ಲ ಎಂದು ಪ್ರಸುತ್ತ ದಾವೆ ಹಾಕಿರುತ್ತಾರೆ. ವಾದಿ ಹಾಗೂ ವಾದಿ ಮಗ ರಾಜಣ್ಣ ಎಷ್ಟು ವರ್ಷಗಳಿಂದ ಗೊತ್ತು ಎಂದರೆ ನಾನು ಅದೇ ಊರಿನವನು ನನಗೆ ಮೊದಲಿನಿಂದಲೂ ಗೊತ್ತು. ತಹಸೀಲ್ದಾರ ಆದೇಶ ಏನು ಎಂದರೆ ಸಾಕ್ಷಿ ತಹಸೀಲ್ದಾರ ಬಂದು ಯಾರು ವ್ಯವಸಾಯ ಮಾಡುತ್ತಾರೆ ಎಂದು ಊರಿನವರನ್ನು ವಿಚಾರಿಸಿ ವರದಿ ಕೊಟ್ಟಿರುತ್ತಾರೆ. ಸದರಿ ವರದಿ ನೋಡಿರುತ್ತಿರಾ ಎಂದರೆ ನೋಡಿಲ್ಲ. ನೀವು ಸದರಿ ವರದಿಗೆ ಸಹಿ ಮಾಡಿರುತ್ತೀರಾ ಎಂದರೆ ಇಲ್ಲ. ನಿಮ್ಮ ಊರಿನವರು ಸಹಿ ಮಾಡಿದಾಗ ನೀವು ಅಲ್ಲಿ ಇದ್ದಿರಾ ಎಂದರೆ ಇಲ್ಲ. ತಹಸೀಲ್ದಾರ ಬಂದಾಗ ಅಲ್ಲಿ ಇದ್ದಿರಾ ಎಂದರೆ ಇಲ್ಲ. ವಾದಿಯ ಮಗ ರಮೇಶ ಟ್ರಸ್ಟ್ ಮಾಡಿಕೊಂಡು ಶಾಲೆಯನ್ನು ನಡೆಸುತ್ತಿದ್ದಾರೆ. ಟ್ರಸ್ಟ್ ಡೀಡ್ ನೋಡಿರುತ್ತೀರಾ ಎಂದರೆ ನೂಡಿಲ್ಲ. ನೀವು ಸರ್ಕಾರಿ ವೃತ್ತಿ ಮಾಡುತ್ತೀರಾ ಎಂದರೆ ಹೌದು. ನಾನು ಕ್ಲರ್ಕ್ ಆಗಿರುತ್ತೆನೆ. ನೀವು ಮತ್ತೊಂದು ಶಾಲೆ ನಡೆದಿಸುತ್ತಿದ್ದಿರಾ ನಿಮಗೆ ವಾದಿ ಮಗ ಸಹಾಯ ಮಾಡುತ್ತಾರೆ ನೀವು ಅವರಿಗೆ ಸಹಾಯ ಮಾಡುತ್ತಿರಿ ಎಂದರೆ ಹೌದು. ಪ್ರತಿವಾದಿ ಯಾವುದೇ ಅಗ್ರಿಮೆಂಟ್ ಮಾಡಿಲ್ಲ ಸದರಿ ಕರಾರು ಪತ್ರ ಸೃಷ್ಟಿ ಮಾಡಿಕೊಂಡಿರುವುದು ಸರಿಯಲ್ಲ. ದಾವಾ ಆಸ್ತಿ 1 ಚದರ ಅಡಿಗಳಿಗೆ 4 ಸಾವಿರ ರೂ.ಗಳು ಎಂದರೆ ನನಗೆ ಗೊತ್ತಿಲ್ಲ. ನೀವು ರಮೇಶ ಸ್ನೇಹಿತ ಆದ ಕಾರಣ ಅವರಿಗೆ ಸಹಾಯ ಮಾಡುವ ಉದ್ದೆಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದಿರಿ ಎಂದರೆ ಸರಿಯಲ್ಲ.

**(ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಅನುಸಾರವಾಗಿ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಸಾ ಓ ಹೇ ಕೇ ಸ ಅದೆ.**

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.